ಕಂ/ಉಪಲೋಕ್/ಬಿಡಿ/1312/2021/
ಪಿಓ.ಎ.ಆರ್.ಇ-5

# ಕರ್ನಾಟಕ ಲೋಕಾಯುಕ್ತ

**ಕಂ/ಉಪಲೋಕ್/ಬಿಡಿ/1312/2021/ಪಿಓ.ಎ.ಆರ್.ಇ-5**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 06/01/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ. ಎಂ.ವಿ.ರಾಮಕೃಷ್ಣಯ್ಯ ಬಿನ್ ಲೇಟ್ ವೀರಣ್ಣ, ರೇಷ್ಮೆ ಪ್ರದರ್ಶಕರು, ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿ, ತಾಂತ್ರಿಕ ಸೇವಾಕೇಂದ್ರ, ಮಧುಗಿರಿ, ತುಮಕೂರು ಜಿಲ್ಲೆ, ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

*****

1. ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ, ತುಮಕೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **ಶ್ರೀ. ಎಂ.ವಿ.ರಾಮಕೃಷ್ಣಯ್ಯ ಬಿನ್ ಲೇಟ್ ವೀರಣ್ಣ, ರೇಷ್ಮೆ ಪ್ರದರ್ಶಕರು, ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿ, ತಾಂತ್ರಿಕ ಸೇವಾಕೇಂದ್ರ, ಮಧುಗಿರಿ, ತುಮಕೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಆದ ನಿಮ್ಮ ಮೇಲೆ **ಶ್ರೀ. ಶ್ರೀರಂಗಯ್ಯ@ ಶ್ರೀರಂಗಪ್ಪ ಬಿನ್ ಸಣ್ಣಪ್ಪ, ಹೊಸಕೆರೆ ಗ್ರಾಮ, ಮಧುಗಿರಿ ತಾಲ್ಲೂಕು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ತಾನು ಹೊಸಕೆರೆ ಗ್ರಾಮದ ರಿ.ಸ.ನಂ.1 ರಲ್ಲಿ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ರೇಷ್ಮೆ ನಾಟಿ ಹಾಗೂ ಹನಿ ನೀರಾವರಿ ಅಳವಡಿಸಿಕೊಂಡಿದ್ದು, ಎದುರುದಾರರು ಅದಕ್ಕೆ ಸಂಬಂಧಪಟ್ಟಂತೆ ಸಬ್ಸಿಡಿ ಹಣ ಹಾಗೂ ಸಾಮಾಗ್ರಿ ಬಾಬತ್ತು ಹಣವನ್ನು ಮಂಜೂರು ಮಾಡಲು 33,000/- ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ತುಮಕೂರು ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ.08/2019 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7(ಎ) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 33,000/-ರೂ. ಲಂಚದ ಹಣ ಪಡೆದು, ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ

ಉಪಲೋಕಾಯುಕ್ತರು-02 ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಶ್ರೀರಂಗಯ್ಯ @ ಶ್ರೀರಂಗಪ್ಪ ಬಿನ್ ಸಣ್ಣಪ್ಪ, ಹೊಸಕೆರೆ ಗ್ರಾಮ, ಮಧುಗಿರಿ ತಾಲ್ಲೂಕು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ತಾನು ಹೊಸಕೆರೆ ಗ್ರಾಮದ ರಿ.ಸ.ನಂ.1 ರಲ್ಲಿ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ರೇಷ್ಮೆ ನಾಟಿ ಹಾಗೂ ಹನಿ ನೀರಾವರಿ ಅಳವಡಿಸಿಕೊಂಡಿದ್ದು, ಎದುರುದಾರರು ಕೂಲಿ ಹಣ ಮಂಜೂರು ಮಾಡಲು 15,000/- ರೂ. ಲಂಚವನ್ನು ಈಗಾಗಲೇ ಪಡೆದುಕೊಂಡಿದ್ದು, ರೇಷ್ಮೆ ನಾಟಿ ಸಬ್ಸಿಡಿ ಹಣ 70,270/- ರೂ. ಮಂಜೂರು ಮಾಡಲು 20,000/- ರೂ. ಲಂಚವನ್ನು ಹಾಗೂ ನರೇಗಾ ಯೋಜನೆ ಅಡಿಯಲ್ಲಿ ಸಾಮಾಗ್ರಿ ಮೊತ್ತ 33,000/- ರೂ. ಮಂಜೂರು ಮಾಡಲು 13,000/- ರೂ. ಹೀಗೆ ಒಟ್ಟು 33,000/- ರೂ. ಲಂಚಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ. ದಿ: 15/03/2019 ರಂದು ದೂರುದಾರರು ಹಾಗೂ ಎದುರುದಾರರು ಫೋನ್ ನಲ್ಲಿ ಮಾತನಾಡಿದಾಗ ಎದುರುದಾರರು ಮೇಲ್ಕಂಡಂತೆ 33,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು ತಮ್ಮ ಮಗನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 16/03/2019 ರಂದು ತುಮಕೂರು ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.08/2019 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಸೋಮಶೇಖರ್ 2) ಪ್ರಭುಲಿಂಗಪ್ಪ ಪೂಜಾರ್ (ನೆರಳುಸಾಕ್ಷಿ), ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನಲ್ಲಿದ್ದ ಮೆಮೊರಿ ಕಾರ್ಡನ್ನು ಹಾಜರುಪಡಿಸಿದ್ದು, ಮೆಮೊರಿ ಕಾರ್ಡಿನಲ್ಲಿದ್ದ ಸಂಭಾಷಣೆಯನ್ನು ಲಿಪಿಕರಿಸಿಕೊಂಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿಕೊಂಡು, ಮೆಮೊರಿ ಕಾರ್ಡನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಮೆಮೊರಿ ಕಾರ್ಡ್‌ನಲ್ಲಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ ರೂ. 33,000/- (2,000 x 16, 500 x 2) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಹಾಳೆಯಲ್ಲಿ

ಬರೆದುಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-1 ಸೋಮಶೇಖರ್‌ರವರ ಮೂಲಕ ದೂರುದಾರರ ಶರ್ಟ್‌ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಸೋಮಶೇಖರ್‌ರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಪ್ರಭುಲಿಂಗ್ ಪೂಜಾರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಟವಲನ್ನು ಕೆಳಗೆ ಬೀಳಿಸುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ದೂರುದಾರರಿಗೆ ವಾಯ್ಸ್ ರೆಕಾರ್ಡರನ್ನು ನೀಡಿ ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 16-03-2019 ರಂದು 11.40 ರಿಂದ 12.50 ಘಂಟೆಯವರೆಗೆ ತುಮಕೂರು ಎಸಿಬಿ ಕಛೇರಿಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ತುಮಕೂರನ್ನು ಬಿಟ್ಟು ಮಧ್ಯಾಹ್ನ 1.35 ಘಂಟೆಗೆ ಮಧುಗಿರಿ ತಲುಪಿದ್ದು, ಈ ಮೊದಲೇ ಎದುರುದಾರರಿಗೆ ಫೋನ್ ಮಾಡಲಾಗಿ, ಸದರಿಯವರು ತಿಳಿಸಿದಂತೆ, ಎದುರುದಾರರ ಕಛೇರಿಯ ಹತ್ತಿರ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ, ದೂರುದಾರರನ್ನು ಹಾಗೂ ನೆರಳುಸಾಕ್ಷಿಯನ್ನು ಎದುರುದಾರರು ಕೆಲಸ ಮಾಡುವ ಕಛೇರಿಯ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಅಲ್ಲಲ್ಲಿ ಕಾರ್ಯಾಲಯದ ಹತ್ತಿರ ಸಂಶಯಬರದಂತೆ ನಿಂತಿರುತ್ತಾರೆ. ಎದುರುದಾರರು ಕಛೇರಿಯಲ್ಲಿ ಹಾಜರಿದ್ದು, ಹಣವು ಇಂದು ಬೇಡ, ಸೋಮವಾರ ಕೊಡು ಎಂದು ಹೇಳಿದ್ದರಿಂದ, ಟ್ರ್ಯಾಪ್‌ಮಾಡಲು ಸಾಧ್ಯವಾಗಿರುವುದಿಲ್ಲ. ಪುನ: ದಿ: 18/03/2019 ರಂದು ಬೆಳಿಗ್ಗೆ 11 ಘಂಟೆಗೆ ದಾಳಿತಂಡದವರು ಮಧುಗಿರಿಯಲ್ಲಿರುವ ಎದುರುದಾರರ ಕಛೇರಿಯ ಹತ್ತಿರ ಬಂದು, ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ, ಕಛೇರಿಯ ಹೊರಭಾಗದಲ್ಲಿ ಗುಪ್ತವಾಗಿ ನಿಂತಿದ್ದು, ದೂರುದಾರರು ಹಾಗೂ ನೆರಳುಸಾಕ್ಷಿದಾರಾದ ಪ್ರಭುಲಿಂಗ್ ಪೂಜಾರ್ ಇವರನ್ನು ಎದುರುದಾರರು ಕೆಲಸ ಮಾಡುವ ಕಛೇರಿಯ ಒಳಗೆ ಕಳುಹಿಸಿದ್ದು, ಎದುರುದಾರರು ಕಛೇರಿಯಲ್ಲಿ ಇಲ್ಲವೆಂದು ತಿಳಿಸಿದ್ದು, ಆತನ ಬರುವಿಕೆಗಾಗಿ ಕಾಯುತ್ತಿದ್ದು, ಸುಮಾರು 11.45 ಘಂಟೆಗೆ ದ್ವಿಚಕ್ರ ವಾಹನದಲ್ಲಿ ಎದುರುದಾರರು

ಬಂದಿರುತ್ತಾರೆ. ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡಿದ್ದು, ನೆರಳುಸಾಕ್ಷಿದಾರರನ್ನು ನೋಡಿ ಸಂಶಯಬಂದು ಹಣವನ್ನು ಟೇಬಲ್ ಕೆಳಗೆ ಹಾಕಿರುತ್ತಾರೆ. ಹಣ ಪಡೆದುಕೊಂಡ ನಂತರ ತನಿಖಾಧಿಕಾರಿಗಳಿಗೆ ದೂರುದಾರರು ಸಂಜ್ಞೆ ನೀಡಿರುತ್ತಾರೆ. ತಕ್ಷಣ ದಾಳಿತಂಡದವರು ಎದುರುದಾರರ ಕಾರ್ಯಾಲಯಕ್ಕೆ ಬಂದು, ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ ಎದುರುದಾರರಿಗೆ ತಿಳಿಸಿರುತ್ತಾರೆ. ಎದುರುದಾರರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ದೂರುದಾರರನ್ನು ವಿಚಾರಿಸಲಾಗಿ, ಎದುರುದಾರರು ಹಣವನ್ನು ಪಡೆದುಕೊಂಡು, ನೆರಳುಸಾಕ್ಷಿಯನ್ನು ನೋಡಿ ಅನುಮಾನ ಬಂದಿದ್ದರಿಂದ ಹಣವನ್ನು ಟೇಬಲ್ ಕೆಳಗೆ ಚೆಲ್ಲಿರುತ್ತಾರೆಂದು ನುಡಿದಿರುತ್ತಾರೆ. ಪಂಚರಿಗೆ ಸದರಿ ನೋಟುಗಳನ್ನು ತೆಗೆದುಕೊಂಡು ತಾಳೆ ಮಾಡಿ ನೋಡಲು ತಿಳಿಸಿದ್ದು, ಪಂಚರು ತಾವು ಈ ಮೊದಲು ದಾಖಲಿಸಿಕೊಂಡ ನೋಟುಗಳ ನಂಬರುಗಳೊಂದಿಗೆ ತಾಳೆ ಮಾಡಿ ಖಾತರಿ ಪಡಿಸಿಕೊಂಡ ಮೇರೆಗೆ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಂದ ರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಎದುರುದಾರರು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳ ಛಾಯಾಪ್ರತಿಗಳನ್ನು ಜಿ.ಅಶ್ವಥ್‌ರೆಡ್ಡಿ, ಪ್ರದರ್ಶಕರು ಇವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ಜಿ. ಅಶ್ವಥ್‌ರೆಡ್ಡಿ, ಪ್ರದರ್ಶಕರು ಇವರಿಗೆ ಈ ಮೊದಲು ಲಂಚ ಬೇಡಿದ ಸಂಭಾಷಣೆಯನ್ನು ಕೇಳಿಸಲಾಗಿ, ಸದರಿಯವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ವಾಯ್ಸ್ ರೆಕಾರ್ಡರ್ ಬಗ್ಗೆ ದೂರುದಾರರನ್ನು ವಿಚಾರಿಸಲಾಗಿ ತಾನು ಆನ್ ಮಾಡಿಕೊಂಡಿರಲಿಲ್ಲವೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಹಾಗೂ ದೂರುದಾರರ ಮಾದರಿ ಧ್ವನಿಯನ್ನು ಪಡೆದುಕೊಂಡು ಡಿ.ವಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 18/03/2019 ರಂದು ಮಧ್ಯಾಹ್ನ 12 ರಿಂದ 3 ಗಂಟೆಯವರೆಗೆ ಮಧುಗಿರಿ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡೂ ಕೈಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ್ದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಜಾರಿ ಮಾಡಿದ್ದು, ಸದರಿಯವರು ಅದ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸದರಿ ಆಕ್ಷೇಪಣೆಯಲ್ಲಿ ಬರೆದುಕೊಂ ಅಂಶವೇನೆಂದರೆ, ಸರ್ಕಾರದ ಪೂರ್ವಾನುಮತಿಯಿಲ್ಲದೆ, ಇಲಾಖಾ ವಿಚಾರಣೆಯನ್ನು ಪ್ರಾರಂಬಿಸಲ ಅಧಿಕಾರವಿರುವುದಿಲ್ಲ ಮತ್ತು ಇಲಾಖಾ ವಿಚಾರಣೆಯನ್ನು ನಡೆಸುವುದು ಸರ್ಕಾರದ ವಿವೇಚನೆ ಒಳಪಟ್ಟಿರುವುದ್ದರಿಂದ ಪರಿವೀಕ್ಷಣಾ ಟಿಪ್ಪಣಿಗೆ ಕಾನೂನಿನ ಪಾವಿತ್ರತೆ ಇರುವುದಿಲ್ಲ. ಎದುರುದಾರರ ರೂ. 33,000/- ಲಂಚವನ್ನು ಪಡೆದದ್ದನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಸಿ ದರ್ಜೆ ನೌಕರರನಾಗಿದ್ದು, ತನಗೆ ಯಾವುದೇ ಅಧಿಕಾರವಿರುವುದಿಲ್ಲ ಮತ್ತು ತನಗೆ ಯಾವುದೇ ಹಣ ಬಿಡುಗಡ ಮಾಡುವ ಕರ್ತವ್ಯವನ್ನು ವಹಿಸಿರುವುದಿಲ್ಲ. ಸಬ್ಸಿಡಿ ಹಣವನ್ನು ನೇರವಾಗಿ ನೆಫ್ಟ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ದಿ: 16-03-2019 ರಂದು ಜಮಾ ಮಾಡಲಾಗಿರುತ್ತದೆ. ಆದಕಾರಣ ಟ್ರ್ಯಾಪ ಕಾಲದಲ್ಲಿ ಯಾವುದೇ ಕೆಲಸ ಎದುರುದಾರರಲ್ಲಿ ಬಾಕಿ ಇರಲಿಲ್ಲ. ಸಾಕ್ಷ್ಯ ಅಧಿನಿಯಮ 65 (ಬಿ) ಪ್ರಕಾರ ನೀಡಿದ ಪ್ರಮಾಣ ಪತ್ರಕ್ಕೆ ದಿನಾಂಕ ಹಾಕಿಲ್ಲವಾದ್ದರಿಂದ ಅದನ್ನು ಪುರಾವೆಯಾಗಿ ಪರಿಗಣಿಸಲು ಬರುವುದಿಲ್ಲ. ಪ್ರಾಯೋಗಿಕ ಪಂಚನಾಮೆಯ ನಡವಳಿಗಳನ್ನು ಮಾಡಲು ಕನಿಷ್ಠ 2 ರಿಂದ 2 1/2 ಗಂಟೆ ಬೇಕಾಗಿದ್ದು, ಕಡಿಮೆ ಅವದಿಯಲ್ಲಿ ಮಾಡಿದ ಪ್ರಾಯೋಗಿಕ ಪಂಚನಾಮೆ ಪ್ರಶ್ನಾರ್ಹವಾಗಿರುತ್ತದೆ. ಟ್ರ್ಯಾಪ ಪಂಚನಾಮೆಯಲ್ಲಿ ದಾಖಲಿಸಿದ ಎಲ್ಲಾ ಘಟನಾವಳಿಗಳನ್ನು ಎದುರುದಾರರು ಅಲ್ಲಗಳೆದಿರುತ್ತಾರೆ. ಮತ್ತು ಲಂಚದ ಹಣವನ್ನು ತನ್ನಿಂದ ಜಪ್ತಿ ಮಾಡಿರುವುದಿಲ್ಲ. **ಫ್ಯಾನಿನ ಗಾಳಿಯಿಂದಾಗಿ ಫಿನಾಪ್ತಲಿನ್ ಪೌಡರ್ ತನಿಖಾಧಿಕಾರಿಯಿಂದ ಎದುರುದಾರರ ಕೈಗೆ ವರ್ಗಾವಣೆಯಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.** ಮುಂದುವರೆದು ಫಿನಾಪ್ತಲಿನ್ ಅಂಶವು ಪತ್ತೆಯಾಗಿರುವ ಬಗ್ಗೆ ನೀಡಿದ ತಜ್ಞರ ವರದಿಯು ಸುಳ್ಳಿನಿಂದ ಕೂಡಿದೆ. ಅಭಿಯೋಜನಾ ಮಂಜೂರಾತಿಯನ್ನು ಮೆಕ್ಯಾನಿಕಲ್ಲಾಗಿ ನೀಡಿರುವುದಾಗಿ ನೀವೆದಿಸಿಕೊಂಡಿದ್ದು, ಈ ಕುರಿತಂತೆ ಕೆಲವು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ. ಈ ಮೇಲೆ ಹೇಳಿದ ಕಾರಣಾಗಳಿಂದಾಗಿ ಇಲಾಖಾ ವಿಚಾರಣೆಯನ್ನು ಮುಕ್ತಾಯ ಮಾಡಲು ವಿನಂತಿಸಿಕೊಂಡಿರುತ್ತಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ ಎದುರುದಾರರು ಭ್ರಷ್ಟಾಚಾರವೆಸಗಿ ದುರ್ನಡತೆವೆಸಗಿರುವುದು ಮೇಲ್ನೋಟದಲ್ಲಿ ಕಂಡು ಬರುತ್ತದೆ.

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತೆಗೆದುಕೊಂಡ ನಿಲುವುಗಳನ್ನು ನಂಬಲು ಹಾಗೂ ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾದಾರಗಳನ್ನು ನಂಬದಿರಲು ಈ ಹಂತದಲ್ಲಿ ಯಾವುದೇ ಬಲವಾದ ಹಾಗೂ ಸಮಂಜಸವಾದ ಆಧಾರಗಳು ಇರುವುದಿಲ್ಲ. ಎದುರುದಾರರನ್ನು ಅಭಿಯೋಜನೆಗೊಳಿಸಲು ನೀಡಿದ ಮಂಜೂರಾತಿ ಆದೇಶವು ಹಾಗೂ ಸಾಕ್ಷಿ ಅಧಿನಿಯಮ 65 (ಬಿ) ಪ್ರಕಾರ ನೀಡಿದ ಪ್ರಮಾಣ ಪತ್ರವು ಕಾನೂನಿಗೆ ಅನುಗುಣವಾಗಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ವಿಚಾರಣಾ ಕಾಲದಲ್ಲಿ ಕಂಡುಕೊಳ್ಳಬಹುದಾಗಿರುತ್ತದೆ. ಈ ಹಂತದಲ್ಲಿ ಮಂಜೂರಾತಿ ಕುರಿತಂತೆ ಎದುರುದಾರರ ನಿಲುವನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ಇಲಾಖಾ ವಿಚಾರಣೆಯನ್ನು ಎದುರುದಾರರ ವಿರುದ್ಧ ನಡೆಸುವುದು ನ್ಯಾಯತಾ ದೃಷ್ಟಿಯಿಂದ ಅತಿ ಅವಶ್ಯವಿರುತ್ತದೆ.

5. ದೂರಿನಲ್ಲಿ ಮಾಡಿದ ಆಪಾದನೆ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ನೀವು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ, ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಕ.ನಾ.ಸೇ. (ನಡತೆ) ನಿಯಮ 3(1) (i) to (iv) ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ, ಎದುರುದಾರರಾದ **ಶ್ರೀ. ಎಂ.ವಿ.ರಾಮಕೃಷ್ಣಯ್ಯ ಬಿನ್ ಲೇಟ್ ವೀರಣ್ಣ, ರೇಷ್ಮೆ ಪ್ರದರ್ಶಕರು, ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿ, ತಾಂತ್ರಿಕ ಸೇವಾಕೇಂದ್ರ, ಮಧುಗಿರಿ, ತುಮಕೂರು ಜಿಲ್ಲೆ,** ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14 (ಎ) ಅನ್ವಯ, ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

11/1/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**